II PUC MID-TERM EXAMINATION, OCTOBER-2026
ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್–2026

Time : 3 Hours | SUBJECT : ECONOMICS ಅರ್ಥಶಾಸ್ತ್ರ (22) | Max. Marks : 80

ಸಮಯ : 3 ಗಂಟೆ | ಗರಿಷ್ಠ ಅಂಕಗಳು : 80

Instructions : 1. Write the question numbers legibly in the margin.
ಸೂಚನೆಗಳು : ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.

2. **Answer to each questions should be continuous.**
ಪ್ರತಿ ಪ್ರಶ್ನೆಗೆ ಉತ್ತರ ನಿರಂತರವಾಗಿರಬೇಕು.

3. **Only the first written answers shall be considered for Part-A questions .**
ಭಾಗ–ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

4. **In Part-F alternative questions are given for visually challenged students.**
ಭಾಗ–'ಎಫ್' ನಲ್ಲಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆಗಳನ್ನು ನೀಡಲಾಗಿದೆ.

PART-A/ ಭಾಗ–ಎ

I Choose the correct answer : **5x1=5**
ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :

1. The scarce resources of an economy have
a) Limited usages b) Competing usages c) Unlimited usages d) Single usages
ಒಂದು ಆರ್ಥಿಕತೆಯ ಕೊರತೆ ಸಂಪನ್ಮೂಲಗಳು
ಎ) ಮಿತ ಬಳಕೆ ಹೊಂದಿವೆ ಬಿ) ಸ್ಪರ್ಧಾತ್ಮಕ ಬಳಕೆಯನ್ನು ಹೊಂದಿವೆ
ಸಿ) ಅಪರಿಮಿತ ಬಳಕೆಯನ್ನು ಹೊಂದಿವೆ ಡಿ) ಏಕ ಬಳಕೆಯನ್ನು ಹೊಂದಿವೆ

2. When TU is constant MU becomes
a) Maximum b) Negative c) Zero d) Positive
TU ಸ್ಥಿರವಾಗಿದ್ದಾಗ MU
ಎ) ಗರಿಷ್ಠವಾಗಿರುತ್ತದೆ ಬಿ) ಋಣಾತ್ಮಕವಾಗಿರುತ್ತದೆ ಸಿ) ಶೂನ್ಯವಾಗಿರುತ್ತದೆ ಡಿ) ಧನಾತ್ಮಕವಾಗಿರುತ್ತದೆ

3. At the mid point of demand curve, the elasticity is
a) Equal to one b) Less than one c) More than one d) Equal to Zero
ಬೇಡಿಕೆ ರೇಖೆಯ ಮಧ್ಯಬಿಂದುವಿನಲ್ಲಿ ಸ್ಥಿತಿಸ್ಥಾಪಕತ್ವವು
ಎ) ಒಂದಕ್ಕೆ ಸಮನಾಗಿರುತ್ತದೆ ಬಿ) ಒಂದಕ್ಕಿಂತ ಕಡಿಮೆ ಇರುತ್ತದೆ
ಸಿ) ಒಂದಕ್ಕಿಂತ ಹೆಚ್ಚು ಇರುತ್ತದೆ ಡಿ) ಶೂನ್ಯಕ್ಕೆ ಸಮನಾಗಿರುತ್ತದೆ

4. The functional relationship between inputs and output is called
a) Consumption Function b) Production Function c) Savings Function d) Investment Function
ಆದಾನಗಳು ಮತ್ತು ಉತ್ಪನ್ನ ನಡುವಿನ ಕ್ರಿಯಾವಲಂಬಿ ಸಂಬಂಧವನ್ನು ಹೀಗೆಂದು ಕರೆಯುತ್ತೇವೆ.
ಎ) ಅನುಭವ ಬಿಂಬಕ ಬಿ) ಉತ್ಪಾದನಾ ಬಿಂಬಕ ಸಿ) ಉಳಿತಾಯ ಬಿಂಬಕ ಡಿ) ಹೂಡಿಕೆ ಬಿಂಬಕ

5. The firms earns super normal profit as long as the price is greater than the minimum of
a) Marginal cost b) Total cost c) Average cost d) Fixed cost
ಈ ಕೆಳಗಿನ ವೆಚ್ಚದ ಕನಿಷ್ಠ ಮಟ್ಟಕ್ಕಿಂತ ಹೆಚ್ಚಾಗಿರುವವರೆಗೆ ಉದ್ಯಮ ಘಟಕಗಳು ಅಸಾಧಾರಣ ಲಾಭಗಳಿಸುತ್ತವೆ.
ಎ) ಸೀಮಾಂತ ವೆಚ್ಚ ಬಿ) ಒಟ್ಟು ವೆಚ್ಚ ಸಿ) ಸರಾಸರಿ ವೆಚ್ಚ ಡಿ) ಸ್ಥಿರ ವೆಚ್ಚ

II Fill in the blanks by choosing appropriate answers given in the bracket: **5x1=5**
ಬಿಟ್ಟ ಸ್ಥಳಗಳಿಗೆ ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :

(Profit, Rent, Utility, Intersect, Variable, Opportunity)
(ಲಾಭ, ಗೇಣಿ, ತುಷ್ಟಿಗುಣ, ಛೇಧಿಸುವುದಿಲ್ಲ, ಬದಲಾಗುತ್ತವೆ, ಸದವಕಾಶ)

6. Wants satisfying capacity of a commodity is __________.
ಬಯಕೆಗಳನ್ನು ತೃಪ್ತಿ ಪಡಿಸುವ ಸರಕಿನ ಸಾಮರ್ಥ್ಯ __________

7. Two indifference curves never ________ each other.
ಎರಡು ಔದಾಸೀನ್ಯ ವಕ್ರರೇಖೆಗಳು ಎಂದಿಗೂ ಪರಸ್ಪರ ________

8. In the long, run all inputs are ____________.
ದೀರ್ಘಾವಧಿಯಲ್ಲಿ ಎಲ್ಲಾ ಆದಾನಗಳು ____________

9. ________ cost of some activity is the gain forgone from the second best activity.
ಕೆಲವು ಚಟುವಟಿಕೆಗಳ __________ ವೆಚ್ಚವು ಬಿಟ್ಟುಕೊಟ್ಟ ಎರಡನೇ ಉತ್ತಮ ಚಟುವಟಿಕೆಯ ಗಳಿಕೆಯಾಗಿರುತ್ತದೆ.

10. A part of the revenue is paid as ________ for the service rendered by land.
ಭೂಮಿಯು ಸಲ್ಲಿಸಿದ ಸೇವೆಗೆ ಆದಾಯದ ಒಂದು ಭಾಗವನ್ನು __________ ರೂಪದಲ್ಲಿ ಪಾವತಿಸಲಾಗುತ್ತದೆ. **5x1=5**

III Match the following :
ಹೊಂದಿಸಿ ಬರೆಯಿರಿ :

11.

A	B
(i) Service of Teachers / ಶಿಕ್ಷಕರ ಸೇವೆ	(a) $\Delta TC / \Delta Q$
(ii) Linear Demand Curve / ಸರಳ ಬೇಡಿಕೆ ರೇಖೆ	(b) Invisible hand / ಕಾಣದ ಕೈ
(iii) SMC	(c) TR – TC
(iv) $\pi =$	(d) TC
(v) Adam Smith/ಆಡಂ ಸ್ಮಿತ್	(e) $D(P) = a - bp$
	(f) Skill / ಕೌಶಲ್ಯ

IV Answer the following questions in a sentence or a word each. **5x1=5**
ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ :

12. Give the meaning of micro economics.
ಸೂಕ್ಷ್ಮ ಅರ್ಥಶಾಸ್ತ್ರದ ಅರ್ಥ ನೀಡಿ.

13. Suppose to a consumer 5 oranges give 30 units of total utility and 6 oranges give 34 units of total utility. Calculate Marginal Utility.
ಒಬ್ಬ ಅನುಭೋಗಿಗೆ 5 ಕಿತ್ತಳೆ ಹಣ್ಣುಗಳು 30 ಘಟಕಗಳ ಒಟ್ಟು ತುಷ್ಟಿಗುಣವನ್ನು ಮತ್ತು 6 ಕಿತ್ತಳೆ ಹಣ್ಣುಗಳು 34 ಘಟಕಗಳಷ್ಟು ಒಟ್ಟು ತುಷ್ಟಿಗುಣವನ್ನು ನೀಡುತ್ತವೆ ಎಂದು ಭಾವಿಸಿದರೆ, ಸೀಮಾಂತ ತುಷ್ಟಿಗುಣವನ್ನು ಕಂಡುಹಿಡಿಯಿರಿ.

14. What is normal profit ?
ಸಾಮಾನ್ಯ ಲಾಭ ಎಂದರೇನು?

15. Given an example for price floor.
ಬೆಲೆ ಅಂತಸ್ತಿಗೆ ಒಂದು ಉದಾಹರಣೆ ನೀಡಿ.

16. What are economic agents ?
ಆರ್ಥಿಕ ಏಜೆಂಟರುಗಳೆಂದರೆ ಯಾರು?

PART-B / ಭಾಗ–ಬಿ

V Answer any SIX of the following questions in 4 sentences each : **6x2=12**
ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ 4 ವಾಕ್ಯಗಳಲ್ಲಿ ಉತ್ತರಿಸಿ.

17. What do you mean by Mixed Economy ? Give an example.
ಮಿಶ್ರ ಆರ್ಥಿಕತೆ ಎಂದರೇನು ? ಒಂದು ಉದಾಹರಣೆ ಕೊಡಿ.

18. Distinguish between positive and normative economics.
ವಾಸ್ತವಿಕ ಮತ್ತು ಮಾದರಿ ಅರ್ಥಶಾಸ್ತ್ರದ ನಡುವಿನ ಭಿನ್ನತೆ ಗುರುತಿಸಿ.

19. Mention two different approaches which explain consumer behaviour.
ಅನುಭೋಗಿಯ ವರ್ತನೆಯನ್ನು ವಿವರಿಸುವ ಎರಡು ವಿಧಾನಗಳನ್ನು ಹೆಸರಿಸಿ.

20. List out factors that determining the demand.
ಬೇಡಿಕೆಯ ನಿರ್ಧಾರಕಗಳನ್ನು ಪಟ್ಟಿ ಮಾಡಿ.

21. What do you man by price elasticity of Demand ? Write its formula.
ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವ ಎಂದರೇನು? ಅದರ ಸೂತ್ರ ಬರೆಯಿರಿ.

22. Mention the types of returns to scale.
ಪ್ರತಿಫಲಗಳ ಪ್ರಮಾಣದ ವಿಧಗಳನ್ನು ತಿಳಿಸಿ.

23. Name any two short run costs.
ಯಾವುದಾದರೂ ಎರಡು ಅಲ್ಪಾವಧಿಯ ವೆಚ್ಚಗಳನ್ನು ಹೆಸರಿಸಿ.

24. Find out the Market Supply where there are supply curves of two producers. $S_1(P) = P - 40$ and $S_2(P) = 2P - 20$ respectively.
ಇಬ್ಬರು ಉತ್ಪಾದಕರ ಪೂರೈಕೆ ರೇಖೆಗಳು ಕ್ರಮವಾಗಿ $S_1(P) = P - 40$ ಮತ್ತು $S_2(P) = 2P - 20$ ಆದಾಗ, ಮಾರುಕಟ್ಟೆ ಪೂರೈಕೆಯನ್ನು ಕಂಡುಹಿಡಿಯಿರಿ.

25. What are 4 factors of production? Mention their rewards.
ನಾಲ್ಕು ಉತ್ಪಾದನಾಂಗಗಳು ಯಾವುವು ? ಅವುಗಳ ಪ್ರತಿಫಲಗಳನ್ನು ಹೆಸರಿಸಿ.

26. Write any two functions of money.
ಹಣದ ಯಾವುದಾದರು ಎರಡು ಕಾರ್ಯಗಳನ್ನು ಬರೆಯಿರಿ.

PART-C / ಭಾಗ–ಸಿ

VI Answer any FIVE of the following questions in 12 sentences each : **5x4=20**

ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ.

27. Write a short not on centrally planned economy.
ಕೇಂದ್ರೀಯ ಯೋಜಿತ ಆರ್ಥಿಕತೆಯನ್ನು ಕುರಿತು ಬರೆಯಿರಿ.

28. Write the differences between Total utility and Marginal utility.
ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

29. Distinguish between normal and inferior goods with examples.
ಸಾಮಾನ್ಯ ಸರಕು ಮತ್ತು ಕೆಳದರ್ಜೆ ಸರಕುಗಳ ನಡುವಿನ ವ್ಯತ್ಯಾಸಗಳನ್ನು ಉದಾಹರಣೆಗಳೊಂದಿಗೆ ಪಟ್ಟಿಮಾಡಿ.

30. Explain Isoquant with the help of a diagram.
ಸಮ ಉತ್ಪನ್ನ ರೇಖೆಯನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.

31. The following table gives the TVC schedule of a firm. TFC is Rs. 20. Find out AFC and AVC.
ಒಂದು ಉದ್ಯಮ ಘಟಕದ TVC ವಿವರ ಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಉದ್ಯಮ ಘಟಕದ TFC ರೂ. 20 ಆಗಿದೆ. AFC ಮತ್ತು AVC ಗಳನ್ನು ಕಂಡುಹಿಡಿಯಿರಿ.

Q :	0	1	2	3	4	5
TVC :	0	30	52	66	80	110

32. Explain the features of perfect competition.
ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಲಕ್ಷಣಗಳನ್ನು ವಿವರಿಸಿ.

33. Write about the determinants of firm's supply curve.
ಉದ್ಯಮ ಘಟಕದ ಪೂರೈಕೆ ರೇಖೆಯ ನಿರ್ಧಾರಕಗಳನ್ನು ವಿವರಿಸಿ.

34. What is Price Ceiling ? Explain with a diagram.
ಬೆಲೆ ಮಿತಿ ಎಂದರೇನು? ರೇಖಾಚಿತ್ರದೊಂದಿಗೆ ವಿವರಿಸಿ.

35. Discuss the emergence of Macroeconomics.
ಸಮಗ್ರ ಅರ್ಥಶಾಸ್ತ್ರದ ಉಗಮವನ್ನು ಕುರಿತು ಚರ್ಚಿಸಿ.

PART-D / ಭಾಗ–ಡಿ

VII Answer any THREE of the following questions in 20 sentences each. **3x6=18**

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ 20 ವಾಕ್ಯಗಳಲ್ಲಿ ಉತ್ತರಿಸಿರಿ.

36. Elucidate the changes in Budget set with the help of diagrams.
ಬಜೆಟ್ ಗಣದಲ್ಲಿರುವ ಬದಲಾವಣೆಗಳನ್ನು ರೇಖಾಚಿತ್ರಗಳ ಸಹಾಯದಿಂದ ವಿಷದ ಪಡಿಸಿ.

37. Discuss the movement along the demand curve and shift in Demand Curve with the help of two diagrams.
ಬೇಡಿಕೆ ರೇಖೆಯೊಂದಿಗಿನ ಚಲನೆಗಳು ಮತ್ತು ಬೇಡಿಕೆ ರೇಖೆಯ ಪಲ್ಲಟಗಳನ್ನು ಎರಡು ರೇಖಾಚಿತ್ರಗಳೊಂದಿಗೆ ವಿವರಿಸಿ.

38. Explain the shapes of Total Product (TP), Average Product (AP) and Marginal Product (MP) curves.
ಒಟ್ಟು ಉತ್ಪನ್ನ (TP), ಸರಾಸರಿ ಉತ್ಪನ್ನ (AP) ಮತ್ತು ಸೀಮಾಂತ ಉತ್ಪನ್ನ (MP) ರೇಖೆಗಳ ಆಕಾರಗಳನ್ನು ವಿವರಿಸಿ.

39. Suppose the demand and supply curves of wheat are given by $q^D = 250 - P$ and $q^S = 120 + P$
a) Find the equilibrium price
b) Find the equilibrium quantity of demand and supply.
c) Find the quantity of demand and supply when P is greater than equilibrium price.
d) Find the quantity of demand and supply when P is lesser than equilibrium price.
ಗೋಧಿಯ ಮಾರುಕಟ್ಟೆ ಬೇಡಿಕೆ ಮತ್ತು ಮಾರುಕಟ್ಟೆ ಪೂರೈಕೆ ರೇಖೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ ಎಂದು ಭಾವಿಸೋಣ.
$q^D = 250 - P$ ಮತ್ತು $q^S = 120 + P$
ಎ) ಸಮತೋಲನ ಬೆಲೆಯನ್ನು ಕಂಡುಹಿಡಿಯಿರಿ.
ಬಿ) ಸಮತೋಲನ ಬೇಡಿಕೆ ಮತ್ತು ಪೂರೈಕೆಗಳನ್ನು ಕಂಡುಹಿಡಿಯಿರಿ.
ಸಿ) ಬೆಲೆಯು ಸಮತೋಲನ ಬೆಲೆಗಿಂತ ಅಧಿಕವಾದಾಗ ಹೊಸ ಬೇಡಿಕೆ ಮತ್ತು ಪೂರೈಕೆಗಳ ಪ್ರಮಾಣವನ್ನು ಕಂಡುಹಿಡಿಯಿರಿ.
ಡಿ) ಬೆಲೆಯು ಸಮತೋಲನ ಬೆಲೆಗಿಂತ ಕಡಿಮೆಯಾದಾಗ ಹೊಸ ಬೇಡಿಕೆ ಮತ್ತು ಪೂರೈಕೆಗಳ ಪ್ರಮಾಣವನ್ನು ಕಂಡುಹಿಡಿಯಿರಿ.

40. Explain the Macro Economic identities.
ಸಮಗ್ರ ಆರ್ಥಿಕ ಅನನ್ಯತೆಗಳನ್ನು ವಿವರಿಸಿ.

PART-E/ ಭಾಗ-ಇ

VIII Answer any TWO of the following project and assignment oriented questions. 2x5=10

ಈ ಕೆಳಗಿನ ಯಾವುದಾದರೂ ಎರಡು ಕಾರ್ಯಗಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ :

41. A consumer wants to consume two goods X_1 and X_2. The price of X_1 is Rs. 50 and the Price of X_2 is Rs. 40. The Consumer's income is Rs. 800. Answer the following :
    a) How many X_1 goods a consumer can consume if the entire income is spent that good?
    b) How many X_2 goods a consumer can consume if the entire income is spent on that good ?
    c) Is the slope of budget line downward or upward ?
    d) Are the bundles on the budget line equal to the consumer's income or not ?
    e) If the consumer wants to have more of X_1 good, X_2 good has to be given up. Is it true ?

    ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. X_1 ಸರಕಿನ ಬೆಲೆ ರೂ. 50 ಮತ್ತು X_2 ಸರಕಿನ ಬೆಲೆ ರೂ. 40 ಆಗಿದ್ದು. ಅನುಭೋಗಿಯ ಆದಾಯ ರೂ. 800 ಆಗಿದೆ. ಈ ಕೆಳಗಿನವುಗಳಿಗೆ ಉತ್ತರಿಸಿ.
    ಎ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ X_1 ಸರಕನ್ನು ಅನುಭೋಗಿಸಬಹುದು?
    ಬಿ) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ X_2 ಸರಕನ್ನು ಅನುಭೋಗಿಸಬಹುದು?
    ಸಿ) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ ?
    ಡಿ) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ ?
    ಇ) ಅನುಭೋಗಿಯು ಒಂದು X_1 ಸರಕನ್ನು ಹೆಚ್ಚುವರಿಯಾಗಿ ಪಡೆಯಲು X_2 ಸರಕನ್ನು ಬಿಟ್ಟುಕೊಡಬೇಕಾಗುತ್ತದೆ. ಇದು ಸರಿಯೇ?

42. Draw a diagram for the following table and identify the equilibrium point, equilibrium price, equilibrium quantity, excess Demand and excess supply in the diagram.
    ಈ ಕೆಳಗಿನ ಕೋಷ್ಟಕಕ್ಕೆ ಒಂದು ರೇಖಾಚಿತ್ರವನ್ನು ರಚಿಸಿ ಮತ್ತು ರೇಖಾಚಿತ್ರದಲ್ಲಿ ಸಮತೋಲನ ಬಿಂದು, ಸಮತೋಲನ ಬೆಲೆ, ಸಮತೋಲನ ಪ್ರಮಾಣ, ಅಧಿಕ ಬೇಡಿಕೆ ಮತ್ತು ಅಧಿಕ ಪೂರೈಕೆಗಳನ್ನು ಗುರುತಿಸಿ.

Price/ಬೆಲೆ	QD	QS
10	100	20
20	80	40
30	60	60
40	40	80
50	20	100

43. Find out the missing values in the following table :
    ಈ ಕೆಳಕಂಡ ಕೋಷ್ಟಕದಲ್ಲಿ ಕಾಣೆಯಾದ ಮೌಲ್ಯಗಳನ್ನು ಕಂಡುಹಿಡಿಯಿರಿ:

Production Levels ಉತ್ಪಾದನಾ ಹಂತಗಳು	Total production ಒಟ್ಟು ಉತ್ಪಾದನೆ	Intermediate goods used ಮಧ್ಯಂತರ ಸರಕುಗಳ ಬಳಕೆ	Value added ಮೌಲ್ಯ ವರ್ಧನೆ
Wheat (Farmer) ಗೋಧಿ (ರೈತ)	500	0	----
Flour (A Miller) ಹಿಟ್ಟು (ಗಿರಣಿಯವರು)	----	500	300
Bread (Baker) ಬ್ರೆಡ್ ಬೇಕರಿಯವನು)	1100	----	300
Retail Shop (Seller) ಚಿಲ್ಲರೆ ಅಂಗಡಿ (ಮಾರಾಟಗಾರ)	----	1100	200
Gross Value added (GVA) ಒಟ್ಟು ಮೌಲ್ಯವರ್ಧನೆ			----

PART-F/ ಭಾಗ-ಎಫ್

FOR VISUALLY CHALLENGED STUDENTS ONLY (ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)

42. Give the meaning of market equilibrium, equilibrium price, equilibrium quantity, Excess Demand, Excess Supply.
    ಮಾರುಕಟ್ಟೆ ಸಮತೋಲನ, ಸಮತೋಲನ ಬೆಲೆ, ಸಮತೋಲನ ಪ್ರಮಾಣ, ಅಧಿಕ ಬೇಡಿಕೆ, ಮತ್ತು ಅಧಿಕ ಪೂರೈಕೆಗಳ ಅರ್ಥ ಬರೆಯಿರಿ.

*****